ಕರ್ನಾಟಕ ಲೋಕಾಯುಕ್ತ

ಸಂ.ಕಂಪ್ಲೇಂಟ್/ಉಪಲೋಕ್/ಎಂವೈಎಸ್/2500/2021/ಎಆರ್‌ಇ-20

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀಧಿ,
ಬೆಂಗಳೂರು-560 001,
ದಿನಾಂಕ:23-08-2022

**ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12 (3) ಅನ್ವಯ ವರದಿ**

ವಿಷಯ: 1) ಬಿ.ಎಂ. ನಾಗರಾಜು, ಉಪವಲಯ ಅರಣ್ಯಾಧಿಕಾರಿ, ಸಾಮಾಜಿಕ ಅರಣ್ಯ ವಲಯ, ಶ್ರೀರಂಗಪಟ್ಟಣ 2) ಶ್ರೀ ಎನ್. ಗೋಪಾಲಕೃಷ್ಣ ರಾವ್, ವಲಯ ಅರಣ್ಯಾಧಿಕಾರಿ, ಸಾಮಾಜಿಕ ಅರಣ್ಯ ವಲಯ, ಶ್ರೀರಂಗಪಟ್ಟಣ, (ನಿವೃತ್ತ) 3) ಶ್ರೀ ಬಿ. ನಾಗರಾಜು, ಹಿಂದಿನ ಎ.ಸಿ.ಎಫ್., ಸಾಮಾಜಿಕ ಅರಣ್ಯ ವಿಭಾಗ, ಮಂಡ್ಯ ಹಾಗೂ ಪ್ರಸ್ತುತ ಸಾಮಾಜಿಕ ಅರಣ್ಯ ವಿಭಾಗ, ಮೈಸೂರು ಮತ್ತು 4) ಶ್ರೀ ಬೈರಾರೆಡ್ಡಿ, ಹಿಂದಿನ ಎ.ಸಿ.ಎಫ್., ಸಾಮಾಜಿಕ ಅರಣ್ಯ ವಿಭಾಗ, ಮಂಡ್ಯ ಹಾಗೂ ಪ್ರಸ್ತುತ ಸಾಮಾಜಿಕ ಅರಣ್ಯ ವಿಭಾಗ, ರಾಮನಗರ ಇವರ (ಎದುರುದಾರರು) ದುರ್ನಡತೆ/ಕರ್ತವ್ಯ ಲೋಪದ ಕುರಿತು.

#####

ಶ್ರೀ ಎಂ. ನಿಂಗರಾಜು ಬಿನ್ ಲೇಟ್ ಮಾದಯ್ಯ, ಮಂಡ್ಯ ತಾಲ್ಲೂಕು ಮತ್ತು ಜಿಲ್ಲೆ ಇವರು (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ರವರು ಎದುರುದಾರರಾದ 1) ಬಿ.ಎಂ. ನಾಗರಾಜು, ಉಪವಲಯ ಅರಣ್ಯಾಧಿಕಾರಿ, ಸಾಮಾಜಿಕ ಅರಣ್ಯ ವಲಯ, ಶ್ರೀರಂಗಪಟ್ಟಣ 2) ಶ್ರೀ ಎನ್. ಗೋಪಾಲಕೃಷ್ಣ ರಾವ್, ವಲಯ ಅರಣ್ಯಾಧಿಕಾರಿ, ಸಾಮಾಜಿಕ ಅರಣ್ಯ ವಲಯ, ಶ್ರೀರಂಗಪಟ್ಟಣ, (ನಿವೃತ್ತ) 3) ಶ್ರೀ ಬಿ. ನಾಗರಾಜು, ಹಿಂದಿನ ಎ.ಸಿ.ಎಫ್., ಸಾಮಾಜಿಕ ಅರಣ್ಯ ವಿಭಾಗ, ಮಂಡ್ಯ ಹಾಗೂ ಪ್ರಸ್ತುತ ಸಾಮಾಜಿಕ ಅರಣ್ಯ ವಿಭಾಗ, ಮೈಸೂರು ಮತ್ತು 4) ಶ್ರೀ ಬೈರಾರೆಡ್ಡಿ, ಹಿಂದಿನ ಎ.ಸಿ.ಎಫ್., ಸಾಮಾಜಿಕ ಅರಣ್ಯ ವಿಭಾಗ, ಮಂಡ್ಯ ಹಾಗೂ ಪ್ರಸ್ತುತ ಸಾಮಾಜಿಕ ಅರಣ್ಯ ವಿಭಾಗ, ರಾಮನಗರ ಇವರ (ಇನ್ನು ಮುಂದೆ ಅನುಕ್ರಮವಾಗಿ "ಎದುರುದಾರರು-1, 2, 3 ಮತ್ತು 4" ಎಂದು ಕರೆಯಲ್ಪಡುತ್ತಾರೆ) ವಿರುದ್ದ ಸಲ್ಲಿಸಿದ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 9ರಡಿಯಲ್ಲಿ ತನಿಖೆಗೆ ತೆಗೆದುಕೊಳ್ಳಲಾಗಿದೆ.

**2. ದೂರಿನ ಸಂಕ್ಷಿಪ್ತ ವಿವರಣೆ:**

ಸದರಿ ದೂರಿನಲ್ಲಿ ವಡಯಾಂಡಹಳ್ಳಿ ಅರಕೆರೆ ಸಾಲು ಒಟ್ಟು ಉದ್ದ 6 ಕಿ.ಮೀ. ಇದ್ದು ಅಂದಾಜು ಪಟ್ಟಿ 239/2018-19ರಲ್ಲಿ ಸಸಿ ನೆಡಲು ಒಟ್ಟು 1200 ಗುಂಡಿಗಳನ್ನು ತೆಗೆಯಲು ದಿನಾಂಕ:10-09-2018ರಂದು ಅಂದಾಜು ಪಟ್ಟಿಗೆ ಅನುಮೋದನೆ ನೀಡಿದ್ದು ಉಳಿದ ಸಸಿ ನೆಡುವ ಮತ್ತು ನಿರ್ವಹಣೆ ಕಾಮಗಾರಿಗಳಿಗೆ ಅಂದಾಜು ಪಟ್ಟಿಗೆ ದಿನಾಂಕ:30-08-2018ರಂದು ಅನುಮೋದನೆ ನೀಡಿದ್ದು ಮಳೆಗಾಲ ಪ್ರಾರಂಭವಾಗುವ ಏಪ್ರಿಲ್ ಮತ್ತು ಮೇ ತಿಂಗಳಿನಲ್ಲಿ ಗುಂಡಿಗಳನ್ನು ತೆಗೆದು ಜೂನ್ ಮತ್ತು ಜುಲೈ ತಿಂಗಳಿನಲ್ಲಿ ಸಸಿಗಳನ್ನು ನಾಟಿ ಮಾಡಿ ಅಂದಾಜು ಪಟ್ಟಿಯಂತೆ ಕಾಮಗಾರಿಗಳನ್ನು ನಿರ್ವಹಿಸದೇ ಸೆಪ್ಟೆಂಬರ್ 2018ರಲ್ಲಿ ಅಂದಾಜು ಪಟ್ಟಿಗೆ ಅನುಮೋದನೆ ಪಡೆದು ಅಕ್ಟೋಬರ್ ·ತಿಂಗಳಿನಲ್ಲಿ ಸಸಿಗಳನ್ನು ನಾಟಿ ಮಾಡಿದರೆ ಸಸಿಗಳು ಬದುಕುಳಿಯುವ ಸಾಧ್ಯತೆಗಳು ಇಲ್ಲದೇ ಇರುವುದರಿಂದ ಇಲಾಖೆಯ ತಾಂತ್ರಿಕ ಪರಿಣಿತೆಯಂತೆ ಕಾಮಗಾರಿ ನಿರ್ವಹಣೆ ಆಗಿರುವುದಿಲ್ಲವೆಂದು, ಸಸಿಗಳನ್ನು ನಾಟಿ ಮಾಡುವ ಮತ್ತು ನಿರ್ವಹಣೆ ಮಾಡುವ ಅಂದಾಜು ಪಟ್ಟಿಗೆ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ರೂ.2,65,.000/-ಗಳಿಗೆ ಅನುಮೋದನೆ ನೀಡಿದ್ದು ಅಂದಾಜು ಪಟ್ಟಿಯಂತೆ ಕಾಮಗಾರಿಯನ್ನು ನಿರ್ವಹಿಸದೇ ವಲಯ ಅರಣ್ಯಾಧಿಕಾರಿಗಳು ಸಾಮಗ್ರಿ ಅಡಿಯಲ್ಲಿ ರೂ.1,42,421/-ಗಳನ್ನು ಪಾವತಿಸಿದ್ದು ಕಾಮಗಾರಿಯ ಛಾಯಾಚಿತ್ರಗಳನ್ನು ತಂತ್ರಾಂಶದಲ್ಲಿ ಅಪ್‌ಲೋಡ್ ಮಾಡಿರುವುದಿಲ್ಲ, ದಿನಾಂಕ:25-11-2019ರಂದು ಮೈಸೂರು ವೃತ್ತದ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು ವಡಯಾಂಡಹಳ್ಳಿ ಅರಕೆರೆ ನಾಲಾವನ್ನು ತಪಾಸಣೆ ಮಾಡಿದಾಗ ಸದರಿ ನೆಡುತೋಪಿನಲ್ಲಿ 1200 ಸಸಿಗಳನ್ನು ನೆಡಲಾಗಿದೆ ಎಂದು ದಾಖಲೆಗಳಲ್ಲಿ ನಮೂದಿಸಿದ್ದು, ಸ್ಥಳದಲ್ಲಿ ಕೇವಲ 325 ಸಸಿಗಳು ಇರುತ್ತವೆ ಎಂದು ಹಾಗೂ 6 ಕಿ.ಮೀ. ಉದ್ದ ಇರುವ ಸದರ ನಾಲಾದ ಬದಿಯಲ್ಲಿ ಕಾಮಗಾರಿಯನ್ನು ನಿರ್ವಹಿಸದೇ ಇದ್ದರೂ ಎದುರುದಾರರು ಗುತ್ತಿಗೆದಾರರ ಜೊತೆ ಹೊಂದಾಣಿಕೆ ಮಾಡಿಕೊಂಡು ಕಾಮಗಾರಿಯನ್ನು ನಿರ್ವಹಿಸಿರುವುದಾಗಿ ದಾಖಲೆಗಳನ್ನು ಸೃಷ್ಟಿ ಮಾಡಿ, ಸೃಷ್ಟಿ ಮಾಡಿರುವ ದಾಖಲೆಗಳಿಗೆ 3ನೇ ಎದುರುದಾರರು ಸಹಿ ಮಾಡಿ ಸರ್ಕಾರಕ್ಕೆ ರೂ.6,63,921/-ಗಳಷ್ಟು ನಷ್ಟ ಉಂಟು ಮಾಡಿರುತ್ತಾರೆಂದು 2018-19ನೇ ಸಾಲಿನಲ್ಲಿ ನಾಲಾಬದು ನೆಡುತೋಪನ್ನು ನಿರ್ಮಾಣ ಮಾಡದೇ ಇದ್ದರೂ ಸಹ 2019-20ನೇ ಸಾಲಿನಲ್ಲಿ ನೆಡುತೋಪು ನಿರ್ಮಾಣ ಮಾಡಿರುವುದಾಗಿ 2ನೇ ಎದುರುದಾರರು ದಾಖಲೆಗಳನ್ನು ಸೃಷ್ಟಿ ಮಾಡಿದ್ದು ಅವುಗಳನ್ನು ಪರಿಶೀಲಿಸಿರುವುದಾಗಿ 4ನೇ ಎದುರುದಾರರು ಸಹಿಯೊಂದಿಗೆ ದೃಢೀಕರಿಸಿರುತ್ತಾರೆಂದು ಇವರುಗಳ ವಿರುದ್ಧ ಕ್ರಮ ತೆಗೆದುಕೊಳ್ಳಲು ಕೋರಿರುವುದು ಕಂಡುಬರುತ್ತದೆ.

**3. ಎದುರುದಾರರ ಆಕ್ಷೇಪಣೆ:**

1ನೇ ಎದುರುದಾರರು ದಿನಾಂಕ:29-11-2021ರ ಆಕ್ಷೇಪಣೆಯಲ್ಲಿ ದೂರುದಾರರು 2018-19ನೇ ಸಾಲಿನಲ್ಲಿ ನಡೆದ ಕಾಮಗಾರಿಯ ಬಗ್ಗೆ ಆಪಾದನೆ ಮಾಡಿದ್ದು ಸದರಿ ಅವಧಿಯಲ್ಲಿ ಶ್ರೀರಂಗಪಟ್ಟಣ ಸಾಮಾಜಿಕ ಅರಣ್ಯ ವಲಯದಲ್ಲಿ

ಉಪ ವಲಯ ಅರಣ್ಯಾಧಿಕಾರಿಯಾಗಿ ಕಾರ್ಯನಿರ್ವಹಿಸಿದ್ದು, ದಾಖಲೆಗಳಲ್ಲಿ ಸದರಿಯವರ ಸಹಿಗಳು ಇರುವುದಿಲ್ಲವೆಂದು ತಿಳಿಸಿರುತ್ತಾರೆ. ಇಲಾಖಾ ಕಾಮಗಾರಿಗಳನ್ನು ಯಾವುದೇ ಮಾಹಿತಿ ನೀಡದೇ ಪ್ರಾರಂಭ ಮಾಡುತ್ತಿರುವ ವಿಚಾರವನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಸಾಮಾಜಿಕ ಅರಣ್ಯ ವಿಭಾಗ, ಮಂಡ್ಯ ಇವರಿಗೆ ಈ-ಮೇಲ್ ಮುಖಾಂತರ ದೂರು ಕೊಟ್ಟಿರುವುದಾಗಿ ನುಡಿದಿರುತ್ತಾರೆ. ವಲಯ ಅರಣ್ಯಾಧಿಕಾರಿಗಳು ಗುತ್ತಿಗೆದಾರರ ಮುಖಾಂತರ ವಡೆಯಾಂಡಹಳ್ಳಿ ಅರಕರೆ ನಾಲಾ ಬದು ನೆಡುತೋಪು ಕಾಮಗಾರಿಯನ್ನು ಸ್ವತ: ನಿರ್ವಹಿಸಿರುತ್ತಾರೆಂದು ನಮೂದಿಸಿರುತ್ತಾರೆ. ಅಂದಾಜು ಪಟ್ಟಿಯಲ್ಲಿ ನಮೂದಾಗಿರುವ ಕೂಲಿ ಹಣ ರೂ.33,915/-ಗಳು ಸಹ ಪಾವತಿಯಾಗದೇ ಉಳಿದಿರುತ್ತದೆ ಎಂದು ತಿಳಿಸುತ್ತಾ, ಸದರಿ ಪ್ರಕರಣದಲ್ಲಿ ಎದುರುದಾರರ ಯಾವುದೇ ಪಾತ್ರ ಇಲ್ಲದಿರುವುದರಿಂದ ಈ ಪ್ರಕರಣದಿಂದ ಹೆಸರನ್ನು ಕೈಬಿಡಲು ವಿನಂತಿಸಿಕೊಂಡಿರುತ್ತಾರೆ.

2ನೇ ಎದುರುದಾರರು ದಿನಾಂಕ:26-12-2021ರ ಆಕ್ಷೇಪಣೆಯಲ್ಲಿ ದೂರುದಾರರ ಆಪಾದನೆಗಳನ್ನು ನಿರಾಕರಿಸಿರುತ್ತಾರೆ. ಸದರಿಯವರು ದಿನಾಂಕ:30-10-2021ರಂದು ಸರ್ಕಾರಿ ಕರ್ತವ್ಯದಿಂದ ವಯೋನಿವೃತ್ತಿ ಹೊಂದಿರುವುದಾಗಿ ತಿಳಿಸಿರುತ್ತಾರೆ. ಸರ್ಕಾರಿ ಹಣ ದುರುಪಯೋಗವಾಗಿರುವುದಿಲ್ಲವೆಂದು, ಗಿಡಗಳಿಗೆ ನೀರು ಹಾಕುವ ಕೆಲಸಕ್ಕೆ ಬಿಲು ಸಲ್ಲಿಸಿದ್ದು ಈ ಬಿಲ್ಲುಗಳಿಗೆ ಸಹಾಯಕ ಅರಣ್ಯ ಸಂರಕ್ಷಣಾದಿಕಾರಿಯವರು 'ನೋಡಿದೆ" ಎಂದು ಸಹಿ ಮಾಡಿರುವುದರಿಂದ ಉಪ ಅರಣ್ಯ ಸಂರಕ್ಷಣಾದಿಕಾರಿಯವರು ಪುರಸ್ಕರಿಸಲಾಗದು ಎಂದು ಮೇಲು ಸಹಿ ಮಾಡದೇ ವಿಲೇ ಇಟ್ಟಿರುತ್ತಾರೆಂದು ತಿಳಿಸಿರುತ್ತಾರೆ. ಮೇಲು ಸಹಿ ಆಗದೇ ಹಣ ಡ್ರಾ ಮಾಡಲು ಬರುವುದಿಲ್ಲವೆಂದು ತಿಳಿಸಿರುತ್ತಾರೆ.

3ನೇ ಎದುರುದಾರರು ದಿನಾಂಕ:05-01-2022ರಂದು ಸಲ್ಲಿಸಿರುವ ಆಕ್ಷೇಪಣೆಯಲ್ಲಿ ಅಂದಾಜು ಪಟ್ಟಿಗಳನ್ನು ಮಂಜೂರು ಮಾಡುವ ಅಧಿಕಾರವು ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ವ್ಯಾಪ್ತಿಗೆ ಬರುವುದರಿಂದ ಸದರಿ ಆಪಾದನೆಯನ್ನು ಕೈಬಿಡಲು ಕೋರಿರುತ್ತಾರೆ. 1200 ಗುಂಡಿಗಳನ್ನು ತೆಗೆದು 1200 ಸಸಿಗಳನ್ನು ನಾಟಿ ಮಾಡಿರುವ ಸಂಬಂಧ ಅಳತೆ ಪುಸ್ತಕದಲ್ಲಿ ದೃಡೀಕರಿಸುವುದಾಗಿ ನುಡಿದಿರುತ್ತಾರೆ. ಸದರಿ ಕಾಮಗಾರಿಯನ್ನು ಸದರಿಯವರ ನಂತರದ ಸಂರಕ್ಷಣಾದಿಕಾರಿಗಳು 1200 ಸಸಿಗಳು ಬದುಕಿವೆ ಎಂದು ಅಳತೆ ಪುಸ್ತಕದಲ್ಲಿ ದೃಢೀಕರಿಸಿರುತ್ತಾರೆಂದು ತಿಳಿಸಿರುತ್ತಾರೆ. ಅರಣ್ಯ ಇಲಾಖೆಯಲ್ಲಿ ಯಾವುದೇ ಕಾಮಗಾರಿಗಳನ್ನು ಅನುಷ್ಠಾನಗೊಳಿಸಬೇಕಾಗಿದ್ದಲ್ಲಿ ಸಾಮಾಜಿಕ ಅರಣ್ಯ ವಿಭಾಗದ ವಾರ್ಷಿಕ ಕ್ರಿಯಾ ಯೋಜನೆಯಂತೆ ಮೈಸೂರು ವೃತ್ತದ ಮುಖ್ಯ ಅರಣ್ಯ ಸಂರಕ್ಷಣಾದಿಕಾರಿಗಳಿಂದ ಆಡಳಿತಾತ್ಮಕ ಮತ್ತು ತಾಂತ್ರಿಕ ಅನುಮೋದನೆ ಪಡೆದ ನಂತರ ಅಂದಾಜು ಪಟ್ಟಿಗಳಿಗೆ ಮಂಜೂರಾತಿ ನೀಡಿರುತ್ತಾರೆಂದು ತಿಳಿಸಿರುತ್ತಾರೆ. 2018-19ನೇ ಸಾಲಿನ ಸಾಮಗ್ರಿ ಮೊತ್ತದ ವೆಚ್ಚವನ್ನು ಉಪ ಅರಣ್ಯ ಸಂರಕ್ಷಣಾದಿಕಾರಿಗಳು ಕಾಮಗಾರಿಯನ್ನು ಪರಿಶೀಲಿಸಿ ಸಾಮಗ್ರಿ ವೆಚ್ಚ ರೂ.1,42,421/-ಗಳನ್ನು ಬಟವಾಡೆ ಮಾಡಿರುವುದಾಗಿ ತಿಳಿಸಿರುತ್ತಾರೆ.

4ನೇ ಎದುರುದಾರರು ದಿನಾಂಕ:29-11-2021ರಂತೆ ತಮ್ಮ ಆಕ್ಷೇಪಣೆಯಲ್ಲಿ 2018-19ನೇ ಸಾಲಿನಲ್ಲಿ ಮಂಡ್ಯ ಸಾಮಾಜಿಕ ಅರಣ್ಯ ಉಪವಿಭಾಗದಲ್ಲಿ ಸಹಾಯಕ ಅರಣ್ಯ ಸಂರಕ್ಷಣಾದಿಕಾರಿಯಾಗಿ ಸೇವೆ ಸಲ್ಲಿಸಿರುವುದಿಲ್ಲವೆಂದು ತಿಳಿಸಿರುತ್ತಾರೆ. ಅಂದಾಜುಪಟ್ಟಿಯಲ್ಲಿ ನೆಡುತೋಪನ್ನು ಜಾನುವಾರುಗಳಿಂದ ರಕ್ಷಣೆ ಮಾಡಲು 3 ಕಿ.ಮೀ.ಗಳಿಗೆ ಒಬ್ಬರಂತೆ ನೆಡುತೋಪು ಕಾವಲುಗಾರರನ್ನು ನೇಮಿಸಿಕೊಳ್ಳಲು ಅವಕಾಶವಿರುತ್ತದೆ. ಈ ಕಾವಲುಗಾರರಿಗೆ ಏಪ್ರಿಲ್ 2019 ರಿಂದ ಮಾರ್ಚ್ 2020ರವರೆಗೆ ಪ್ರತಿ ತಿಂಗಳು ಅಂದರೆ ಪ್ರತಿ ದಿನಕ್ಕೆ ರೂ.327.72ರಂತೆ ಕೂಲಿ ಪಾವತಿಸಲು ಅಂದಾಜು ಪಟ್ಟಿಯಲ್ಲಿ ಅವಕಾಶವಿರುತ್ತದೆ ಎಂದು ತಿಳಿಸಿರುತ್ತಾರೆ. ಏಪ್ರಿಲ್-2019 ರಿಂದ ಸೆಪ್ಟೆಂಬರ್-2019ರ ತನಕ ಕಾವಲುಗಾರರ ಕೂಲಿ ಬಾಬ್ತನ್ನು ಗುತ್ತಿಗೆದಾರರ ಪ್ರಮಾಣಪತ್ರದಲ್ಲಿ ನನ್ನಿಂದ ದೃಢೀಕರಿಸಿ ಉಪ ಅರಣ್ಯ ಸಂರಕ್ಷಣಾದಿಕಾರಿಗಳಿಗೆ ಸಲ್ಲಿಸಿರುತ್ತಾರೆ. ಹಣವನ್ನು ಬಿಡುಗಡೆ ಮಾಡುವ ಅಧಿಕಾರವು ಉಪ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ಇದ್ದು ವಲಯ ಅರಣ್ಯಾಧಿಕಾರಿಗಳು ಸಲ್ಲಿಸಿರುವ ಬಿಲ್ಲುಗಳನ್ನು ತಡೆ ಹಿಡಿದು ಯಾವುದೇ ಹಣ ಬಿಡುಗಡೆ ಮಾಡಿರುವುದಿಲ್ಲ. ಇದರಿಂದ ಸರ್ಕಾರದಿಂದ ಹಣಕಾಸಿನ ನಷ್ಟ ಉಂಟಾಗಿರುವುದಿಲ್ಲವೆಂದು ತಿಳಿಸಿರುತ್ತಾರೆ. ಸೆಪ್ಟೆಂಬರ್ 2019ರ ಮಾಹೆಯಲ್ಲಿ ನೆಡುತೋಪಿನ ನಿರ್ವಹಣೆ ಬಗ್ಗೆ ವಲಯ ಅರಣ್ಯಾಧಿಕಾರಿಗಳು ಸಲ್ಲಿಸಿರುವ ಗುತ್ತಿಗೆದಾರರ ಪ್ರಮಾಣಪತ್ರವನ್ನು ದೃಢೀಕರಿಸಿರುವುದಾಗಿ ತಿಳಿಸಿರುತ್ತಾರೆ. ರಸ್ತೆ ಬದಿಯ 6 ಕಿ.ಮೀ. ನೆಡುತೋಪಿಗೆ ದೃಢೀಕರಿಸಿರುವ ಗುತ್ತಿಗೆದಾರರ ಪ್ರಮಾಣಪತ್ರದಲ್ಲಿರುವ ಮೊತ್ತಕ್ಕೆ ಸರ್ಕಾರದಿಂದ ಯಾವುದೇ ವೆಚ್ಚ ಭರಿಸಿರುವುದಿಲ್ಲ. ಆದ್ದರಿಂದ ಯಾವುದೇ ಆರ್ಥಿಕ ನಷ್ಟ ಉಂಟಾಗಿರುವುದಿಲ್ಲವೆಂದು ತಿಳಿಸುತ್ತಾ ಪ್ರಕರಣದಿಂದ ಮುಕ್ತಗೊಳಿಸಲು ಕೋರಿರುತ್ತಾರೆ.

ಮಂಡ್ಯ ಕರ್ನಾಟಕ ಲೋಕಾಯುಕ್ತ ಕಛೇರಿಯ ಪೊಲೀಸ್ ನಿರೀಕ್ಷಕರು ವರದಿಯನ್ನು ಸಲ್ಲಿಸಿರುತ್ತಾರೆ. ಸದರಿ ವರದಿಯಲ್ಲಿ ದೂರುದಾರರು ಮಾಡಿರುವ ಆಪಾದನೆಗಳು ಸಾಬೀತಾಗಿರುತ್ತವೆ ಎಂದು ತಿಳಿಸಿರುತ್ತಾರೆ.

**4. ಒಟ್ಟಾರೆ ಅಭಿಪ್ರಾಯ:**

ದೂರುದಾರರು ಸಲ್ಲಿಸಿರುವ ದೂರು ಅರ್ಜಿ, ಎದುರುದಾರರು ಸಲ್ಲಿಸಿರುವ ಆಕ್ಷೇಪಣೆ, ದೂರುದಾರರು ಸಲ್ಲಿಸಿರುವ ಪ್ರತ್ಯುತ್ತರ ಹಾಗೂ ಮಂಡ್ಯ ಕರ್ನಾಟಕ ಲೋಕಾಯುಕ್ತ ಕಛೇರಿಯ ಪೊಲೀಸ್ ನಿರೀಕ್ಷಕರ ವರದಿಯನ್ನು ಪರಿಶೀಲಿಸಿದಾಗ ಈ ಕೆಳಕಂಡ ಅಂಶಗಳು ಕಂಡುಬಂದಿರುತ್ತವೆ.

ತನಿಖಾದಿಕಾರಿಯವರು ತಮ್ಮ ತನಿಖಾ ವರದಿಯಲ್ಲಿ ಕಾಲುವೆ ಏರಿಯಾದಲ್ಲಿ 1200 ಗುಂಡಿಗಳನ್ನು ತೆಗೆಯಲಾಗಿದ್ದು, 1200 ಗುಂಡಿಗಳು ಕಂಡುಬಂದಿರುತ್ತವೆ ಎಂದು ತಿಳಿಸಿದ್ದು ಆದರೆ ಗಿಡಗಳನ್ನು ಸರಿಯಾಗಿ ನಿರ್ವಹಣೆ ಮಾಡದ ಕಾರಣ ಕೆಲವು ಗಿಡಗಳು ಗುಂಡಿಯಲ್ಲಿ ಇರುವುದಿಲ್ಲವೆಂದು ತಿಳಿಸಿರುತ್ತಾರೆ. ಗುಂಡಿಯಲ್ಲಿ ಗಿಡಗಳು ಇಲ್ಲದೇ

ಇರುವುದು ಅರಣ್ಯಾಧಿಕಾರಿಗಳ ಬೇಜವಾಬ್ದಾರಿಯನ್ನು ತೋರಿಸುತ್ತದೆ. ಏಕೆಂದರೆ 3 ಕಿ.ಮೀ. ದೂರಕ್ಕೆ ಒಬ್ಬರು ಕಾವಲುಗಾರರು ಇದ್ದು ಸದರಿಯವರಿಗೆ ಪ್ರತಿ ದಿನ ರೂ.327.72ರಂತೆ ಕೂಲಿಯನ್ನು ಪಾವತಿಸಲಾಗಿರುತ್ತದೆ. ಹೀಗಾಗಿ ಗುಂಡಿಗಳಲ್ಲಿ ಗಿಡಗಳು ಇಲ್ಲದೇ ಇರುವುದಕ್ಕೆ ಕಾವಲುಗಾರರು ಕಾರಣರಾಗಿರುತ್ತಾರೆ. ಕಾವಲುಗಾರರು ಗಿಡಗಳನ್ನು ಸರಿಯಾಗಿ ನಿರ್ವಹಣೆ ಮಾಡದೇ ಇರುವುದರಿಂದ ಕಾವಲುಗಾರರಿಗೆ ನೀಡಿರುವ ಹಣವು ದುರುಪಯೋಗವಾಗಿರುತ್ತದೆ. ಸರ್ಕಾರದ ಈ ಹಣ ದುರುಪಯೋಗಕ್ಕೆ ಎದುರುದಾರರು ಕಾರಣರಾಗಿರುತ್ತಾರೆ.

ದಾಖಲಾತಿಗಳ ಪ್ರಕಾರ ಕಾಮಗಾರಿಯನ್ನು ಪ್ರಾರಂಭಿಸಲು ದಿನಾಂಕ:30–08–2018ರಂದು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಆದೇಶ ನೀಡಿರುತ್ತಾರೆ. ಎದುರುದಾರರು ದೃಢೀಕರಿಸಿರುವ ದಾಖಲೆಗಳಾದ ಅನುಬಂಧ–12 ರಿಂದ ಅನುಬಂಧ–21ರವರೆಗಿನ ದಾಖಲೆಗಳನ್ನು ಪರಿಶೀಲಿಸಿದಾಗ ಕಾಮಗಾರಿ ಆದೇಶವನ್ನು ದಿನಾಂಕ:30–08–2018ರಂದು ನೀಡಿದ್ದು, ಆದರೆ ಕಾಮಗಾರಿಯ ಅಳತೆಗಳನ್ನು ಅಳತೆ ಪುಸ್ತಕ ಸಂಖ್ಯೆ.10670 ಪುಟ ಸಂಖ್ಯೆ.91 ಮತ್ತು 92ರಲ್ಲಿ CM by ACF (Check measure by Assistant Conservator of Forest) on:02-07-2018, 25-7-2018, ಎಂದು ಸ್ಪಷ್ಟವಾಗಿ ನಮೂದು ಮಾಡಲಾಗಿರುತ್ತದೆ. ಸದರಿ ಅನುಬಂಧಗಳಲ್ಲಿ ಗುತ್ತಿಗೆದಾರರಾದ ಶ್ರೀಮತಿ ವನಿತಾ ಇವರ ಸಹಿಯು ಸಹ ಸ್ಪಷ್ಟವಾಗಿರುತ್ತದೆ. ಅಂದರೆ ಕಾಮಗಾರಿಯ ಕಾರ್ಯಾದೇಶವನ್ನು ನೀಡುವ ಮೊದಲೇ ಅಳತೆ ಪುಸ್ತಕಗಳಲ್ಲಿ ಕಾಮಗಾರಿಯ ಮಾಹಿತಿಯನ್ನು ನಮೂದು ಮಾಡಿರುವುದು ತಪ್ಪಾಗಿರುತ್ತದೆ.

ಲೋಕಾಯುಕ್ತ ಪೊಲೀಸ್ ಇನ್ಸ್‌ಪೆಕ್ಟರ್ ಇವರು ಸಲ್ಲಿಸಿರುವ ತನಿಖಾ ವರದಿಯಿಂದ ಎದುರುದಾರ–1, 2, 3 ಮತ್ತು 4 ಇವರುಗಳ ವಿರುದ್ಧ ದೂರುದಾರರು ಮಾಡಿರುವ ಆಪಾದನೆಯು ಸಾಬೀತಾಗಿರುತ್ತದೆ.

ಮೇಲಿನ ಕಾರಣಗಳಿಂದ ಹಾಗೂ ಕಡತವನ್ನು ಪರಿಶೀಲಿಸಿದಾಗ ಎದುರುದಾರರಾದ 1ನೇ ಎದುರುದಾರರಾದ ಬಿ.ಎಂ. ನಾಗರಾಜು, ಉಪವಲಯ ಅರಣ್ಯಾಧಿಕಾರಿ, ಸಾಮಾಜಿಕ ಅರಣ್ಯ ವಲಯ, ಶ್ರೀರಂಗಪಟ್ಟಣ (ನಿವೃತ್ತಿ ದಿನಾಂಕ:30–09–2047) 2ನೇ ಎದುರುದಾರರಾದ ಶ್ರೀ ಎನ್. ಗೋಪಾಲಕೃಷ್ಣ ರಾವ್, ವಲಯ ಅರಣ್ಯಾಧಿಕಾರಿ, ಸಾಮಾಜಿಕ ಅರಣ್ಯ ವಲಯ, ಶ್ರೀರಂಗಪಟ್ಟಣ, (ಈಗಾಗಲೇ ದಿನಾಂಕ:30–10–2021ರಂದು ನಿವೃತ್ತಿ ಹೊಂದಿರುತ್ತಾರೆ) 3ನೇ ಎದುರುದಾರರಾದ ಶ್ರೀ ಬಿ. ನಾಗರಾಜು, ಹಿಂದಿನ ಎ.ಸಿ.ಎಫ್., ಸಾಮಾಜಿಕ ಅರಣ್ಯ ವಿಭಾಗ, ಮಂಡ್ಯ ಹಾಗೂ ಪ್ರಸ್ತುತ ಸಾಮಾಜಿಕ ಅರಣ್ಯ ವಿಭಾಗ, ಮೈಸೂರು (ನಿವೃತ್ತಿ ದಿನಾಂಕ:31–07–2047) ಮತ್ತು 4ನೇ ಎದುರುದಾರರಾದ ಶ್ರೀ ಬೈರಾರೆಡ್ಡಿ, ಹಿಂದಿನ ಎ.ಸಿ.ಎಫ್., ಸಾಮಾಜಿಕ ಅರಣ್ಯ ವಿಭಾಗ, ಮಂಡ್ಯ ಹಾಗೂ ಪ್ರಸ್ತುತ ಸಾಮಾಜಿಕ ಅರಣ್ಯ ವಿಭಾಗ, ರಾಮನಗರ (ನಿವೃತ್ತಿ ದಿನಾಂಕ:31–07–2047) ಇವರು



6

ಸರ್ಕಾರಿ/ಸಾರ್ವಜನಿಕ ಸೇವಕರಾಗಿದ್ದು, ತಮ್ಮ ಕರ್ತವ್ಯ ಪಾಲನೆಯಲ್ಲಿ ಪರಿಪೂರ್ಣ ಕರ್ತವ್ಯನಿಷ್ಠೆಯನ್ನು ತೋರಿಸದೆ ಸಾರ್ವಜನಿಕ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು, 1966ರ, ನಿಯಮ 3(1) (i) ರಿಂದ (iii) ರಲ್ಲಿ ಹೇಳಿದಂತೆ ದುರ್ವರ್ತನೆಯಿಂದ ವರ್ತಿಸಿ ಶಿಸ್ತು ಕ್ರಮಕ್ಕೆ ಬಾಧ್ಯರಾಗಿದ್ದಾರೆಂದು ಕಂಡುಬಂದಿರುತ್ತದೆ ಹಾಗೂ 2ನೇ ಎದುರುದಾರರಾದ ಶ್ರೀ ಎನ್. ಗೋಪಾಲಕೃಷ್ಣ ರಾವ್, ವಲಯ ಅರಣ್ಯಾಧಿಕಾರಿ, ಸಾಮಾಜಿಕ ಅರಣ್ಯ ವಲಯ, ಶ್ರೀರಂಗಪಟ್ಟಣ, ಈಗಾಗಲೇ ಸರ್ಕಾರಿ ಕರ್ತವ್ಯದಿಂದ ದಿನಾಂಕ:30-10-2021ರಂದು ನಿವೃತ್ತಿ ಹೊಂದಿರುವುದರಿಂದ ಸದರಿಯವರ ವಿರುದ್ಧ ನಿಯಮ 214(2) (ಬಿ) (ii) ಕರ್ನಾಟಕ ನಾಗರೀಕ ಸೇವಾ ನಿಯಮಗಳ ಪ್ರಕಾರ ಹಾಗೂ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(3) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, ಈ ಮೂಲಕ ಎದುರುದಾರರ ವಿರುದ್ಧ ಶಿಸ್ತು ನಡವಳಿಕೆ ಹೂಡಲು ಮತ್ತು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14-ಎ ರ ಅಡಿಯಲ್ಲಿ ಇಲಾಖಾ ವಿಚಾರಣೆ ನಡೆಸಲು ಉಪಲೋಕಾಯುಕ್ತರು-2 ರವರಿಗೆ ಒಪ್ಪಿಸುವಂತೆ, ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಿದೆ.

ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984 ಕಲಂ 12(4)ರ ಪ್ರಕಾರ, ಶಿಸ್ತು ಪ್ರಾಧಿಕಾರವು ಈ ವರದಿಯ ಮೇಲೆ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿರುವ ಕ್ರಮವನ್ನು ವರದಿ ತಲುಪಿದ ದಿನಾಂಕದಿಂದ ಮೂರು ತಿಂಗಳ ಅವಧಿಯೊಳಗೆ ಈ ಪ್ರಾಧಿಕಾರಕ್ಕೆ ವರದಿ ಸಲ್ಲಿಸತಕ್ಕದ್ದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

K.N. Phaneendra 23/8/22

(ನ್ಯಾಯಮೂರ್ತಿ ಕೆ.ಎನ್. ಫಣೀಂದ್ರ)
ಉಪಲೋಕಾಯುಕ್ತರು
ಕರ್ನಾಟಕ ರಾಜ್ಯ.